**(ಉ) ವಿಷಯ :- <u>ಬೆಣ್ಣೂರು ಗ್ರಾಮವು ಯಗಚಿ ಹಿನ್ನೀರಿನಿಂದ ಮುಳುಗಡೆಯಾಗಿದ್ದು, ಸುತ್ತಮುತ್ತಲಿನ ಗ್ರಾಮಗಳಿಗೆ ರಸ್ತೆ ಸಂಪರ್ಕವಿಲ್ಲದಿರುವುದರಿಂದ ಹೊಸ ರಸ್ತೆ ನಿರ್ಮಾಣ ಕುರಿತು.</u>**

**ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಶ್ರೀ ವೈ.ಎನ್. ರುದ್ರೇಶಗೌಡ ರವರ ಪರವಾಗಿ)** :- ಮಾನ್ಯ ಅಧ್ಯಕ್ಷರೆ, ಬೇಲೂರು ತಾಲ್ಲೂಕಿನ ಬೆಣ್ಣೂರು ಗ್ರಾಮವು ಯಗಚಿ ಹಿನ್ನೀರಿನಿಂದ ಮುಳುಗಡೆಯಾಗಿದ್ದು, ಸುತ್ತಮುತ್ತಲಿನ ಗ್ರಾಮಗಳಿಗೆ ರಸ್ತೆ ಸಂಪರ್ಕವಿಲ್ಲದಿರುವುದರಿಂದ ಹೊಸ ರಸ್ತೆ ನಿರ್ಮಾಣ ಮಾಡುವ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಯಗಚಿ ಅಣೆಕಟ್ಟೆಯ ಹಿನ್ನೀರಿನಿಂದ ಸಂಪರ್ಕ ರಸ್ತೆಯು ಕಡಿತಗೊಂಡಿರುವ ಗ್ರಾಮಗಳಾದ ಬೆಣ್ಣೂರು, ಹೊಸಮನೆಹಳ್ಳಿ, ಹಲ್ಮಡಿ, ದಾಸನಗೌಡಹಳ್ಳಿ, ಕೆಳಹಳ್ಳಿ, ನಾರಾಯಣಪುರ ಗ್ರಾಮಗಳಿಗೆ ಬೇಲೂರು-ಚಿಕ್ಕಮಗಳೂರು ರಸ್ತೆಯ ಚನ್ನಾಪುರ ಗಡಿಯಿಂದ ಸಂಪರ್ಕ ಕಲ್ಪಿಸುವ ರಸ್ತೆಯು 6 ಕಿ.ಮೀ ಉದ್ದವಿದ್ದು ಈ ಪೈಕಿ ಚನ್ನಾಪುರದಿಂದ ಹಲ್ಮಡಿವರೆಗಿನ ರಸ್ತೆಗೆ ಲೋಕೋಪಯೋಗಿ ಇಲಾಖೆಯಿಂದ ಡಾಂಬರೀಕರಣವನ್ನು ಮಾಡಲಾಗಿರುತ್ತದೆ.

ಹಲ್ಮಡಿಯಿಂದ ಹೊಸಮನೆಹಳ್ಳಿಗೆ ಸೇರುವ ರಸ್ತೆಯು 2 ಕಿ.ಮೀ ಉದ್ದವಿದ್ದು, ಜಲ್ಲಿ ಮೇಲ್ಮೈ ಹೊಂದಿರುವ ರಸ್ತೆಯಾಗಿದ್ದು ಸಧ್ಯ ಸಂಪೂರ್ಣವಾಗಿ ಹಾಳಾಗಿರುತ್ತದೆ. ಇದನ್ನು ದುರುಸ್ತಿ ಮಾಡಿ ಡಾಂಬರೀಕರಣಗೊಳಿಸಿ ಹೊಸದಾಗಿ ರಸ್ತೆ ನಿರ್ಮಿಸಲು ರೂ. 10.00 ಲಕ್ಷಗಳಿಗೆ ಅಂದಾಜು ತಯಾರಿಸಿದ್ದು ಇದರ ಜೊತೆಗೆ ಅತ್ತಲಗೆರೆ ಪುನರ್ವಸತಿ ಕೇಂದ್ರದ 1 ಕಿ.ಮೀ ಉದ್ದದ ರಸ್ತೆ ನಿರ್ಮಾಣಕ್ಕೆ ರೂ. 10.00 ಲಕ್ಷಗಳಲ್ಲಿ 2 ಪದರ ಜೆಲ್ಲಿ ಹಾಗೂ ಡಾಂಬರೀಕರಣ ಸೇರಿದಂತೆ ಕಾಮಗಾರಿ ಮಾಡಲು ಉದ್ದೇಶಿಸಿ, ಈ ಎರಡು ಕಾಮಗಾರಿಗಳಿಗೆ ಒಟ್ಟು 20.00 ಲಕ್ಷಗಳಿಗೆ ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನೆ, ಗೇರೂರು ಇವರು ಮಂಜೂರಾತಿ ನೀಡಿದ್ದು ಈ ಕಾಮಗಾರಿಯನ್ನು ತಕ್ಷಣ ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ** :- ಮಾನ್ಯ ಅಧ್ಯಕ್ಷರೆ, ಇದು ನನ್ನ ಹಿಂದಿನ ಕ್ಷೇತ್ರ. ನಾನು ಹಿಂದೆ ಇದ್ದಾಗ ನಬಾರ್ಡ್ ಸ್ಕೀಮ್‌ನಲ್ಲಿ ಸುಮಾರು 50 ಲಕ್ಷ ರೂ. ಗಳನ್ನು ಮಂಜೂರು ಮಾಡಿಸಿ ಈಗಾಗಲೇ ನಾಲ್ಕು ಕಿ.ಮಿ. ರಸ್ತೆ ಚೆನ್ನಾಗಿ ಡಾಂಬರೀಕರಣ ಆಗಿದೆ. ಇನ್ನು ಎರಡು ಕಿ.ಮಿ. ಬಾಕಿ ಇದೆ. ತಾವು ಮಂಜೂರಾತಿ ಕೊಟ್ಟಿದ್ದೇನೆಂದು ಹೇಳುತ್ತಿದ್ದೀರಿ, ತಮಗೆ ಕೃತಜ್ಞನೆಗಳನ್ನು ಸಲ್ಲಿಸುತ್ತೇನೆ. ಜೊತೆಗೆ ಅದೇ ರಸ್ತೆಯಲ್ಲಿ ಹಿನ್ನೀರಿನಿಂದ ಒಂದು ಸೇತುವೆ ಇದೆ, ಆ ಸೇತುವೆ ಮುಳುಗಿ ಅದರ ಮೇಲೆ 4- 5 ಅಡಿ ನೀರು ನಿಲ್ಲುತ್ತದೆ. ಆ ಸೇತುವೆ ಕೂಡ ಜೊತೆಗೆ ಆಗಬೇಕು. ಈ ಕಾಮಗಾರಿಯನ್ನು ತಕ್ಷಣ ಪ್ರಾರಂಭ ಮಾಡುವುದರ ಜೊತೆಗೆ ಆ ಸೇತುವೆಗೆ ಕೂಡ ಮಂಜೂರಾತಿ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೆನೆ.

**ಶ್ರೀ ಬಸವರಾಜ ಬೊಮ್ಮಾಯಿ** :- ರಸ್ತೆ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲಾಗುವುದು. ಸೇತುವೆ ಬಗ್ಗೆ ನಾನು ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಸೂಚನೆಕೊಡುತ್ತೆನೆ.

**(ಊ) ವಿಷಯ: <u>ಹುಣಸೂರು ಉದ್ದೂರು ಕಾವಲ್ ಮತ್ತು ಆಸ್ಪತ್ರೆ ಕಾವಲ್ ಸಹಕಾರ ಸಂಘದ ಸದಸ್ಯರಿಗೆ ಜಮೀನು ಮಂಜೂರು ಮಾಡುವ ಕುರಿತು.</u>**

**ಶ್ರೀ ಹೆಚ್.ಪಿ. ಮಂಜುನಾಥ್**:- ಮಾನ್ಯ ಅಧ್ಯಕ್ಷರೆ, ಹುಣಸೂರು ತಾಲ್ಲೂಕಿನ ಸಣ್ಣ ಹಿಡುವಳಿದಾರರ ಬಗ್ಗೆ ಸನ್ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಹುಣಸೂರು ಉದ್ದೂರು ಆಸ್ಪತ್ರೆ ಕಾವಲ್ ಬೇಸಾಯಸಹಕಾರ ಸಂಘಕ್ಕೆ ಸಂಘದ ಸದಸ್ಯರುಗಳಿಗೆ ವ್ಯವಸಾಯ ಉದ್ದೇಶಕ್ಕಾಗಿ ಗುತ್ತಿಗೆ ಮೂಲಕ ನೀಡಲು ಮಂಜೂರಾದ ಜಮೀನನ್ನು ಈ ಹಿಂದೆ ಸದಸ್ಯರುಗಳಿಗೆ ಗುತ್ತಿಗೆಗೆ ಮಂಜೂರು ಮಾಡಲಾಗಿತ್ತು. ಸಂಘವು ಗುತ್ತಿಗೆ ಮೊಬಲಗನ್ನು ಸಂಘದ ಸದಸ್ಯರುಗಳಿಂದ ವಸೂಲಾತಿ ಮಾಡಿರವುದನ್ನು ಸರ್ಕಾರಕ್ಕೆ ಜಮಾ ಮಾಡದೇ ಇದ್ದುದರಿಂದ, ಸಂಘದ ಸದಸ್ಯರುಗಳ ಒತ್ತಾಯದ ಮೇರೆಗೆ ಸಂಘದ ಸದಸ್ಯರುಗಳು ತಮ್ಮ ಹಿಡುವಳಿ ಜಮೀನು ಸಂಘದವತಿಯಿಂದ ಗುತ್ತಿಗೆಗೆ ಮಂಜೂರಾದ ಜಮೀನು ಎರಡೂ ಸೇರಿ 2-00 ಹೆಕ್ಟೇರ್‌ಗಿಂತ ಕಡಿಮೆ ಜಮೀನು ಹೊಂದಿರುವವರುಗಳಿಗೆ ಸಂಘಕ್ಕೆ ಬರಬೇಕಾದ ಗುತ್ತಿಗೆ ಮೊಬಲಗು ಮತ್ತು ಕಂದಾಯ ಬಾಕಿ ಮೊಬಲಗನ್ನು ವಸೂಲಾತಿ ಮಾಡುವ